ಶಿಕಾರಿಪುರ ನಗರದ ಹೊಸ ಬಡಾವಣೆಗಳಲ್ಲಿ ಕುಡಿಯುವ ನೀರಿನ ಅಭಾವ

357 (112): ಶ್ರೀ ಬಿ.ಎಸ್. ಯಡಿಯೂರಪ್ಪ:–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ನಗರದ ಹೊಸ ಬಡಾವಣೆಗಳಿಗೆ ಕುಡಿಯುವ ನೀರಿನ ಸಮಸ್ಯೆ ಇರುವುದು ನಿಜವೇ;

ಆ) ಹಾಗಿದ್ದಲ್ಲಿ ಕುಡಿಯುವ ನೀರಿನ ಅಭಿವೃದ್ಧಿಗಾಗಿ ಹೊಸ ಬಡಾವಣೆಗಳಲ್ಲಿ ನೀರಿನ ಟ್ಯಾಂಕ್ ಕಟ್ಟುವ ಯೋಜನೆ ಇದೆಯೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಹೌದು.

ಆ) ಹೊಸ ಬಡಾವಣೆಗಳಾದ ಚನ್ನಕೇಶವ ನಗರ, ಜಯನಗರ, ದೇವರಾಜ ಅರಸ್ ಮತ್ತು ಸರಸ್ವತಿ ಪುರಂ, ಈ ಬಡಾವಣೆಗಳಿಗೆ ನೀರನ್ನು ಪೂರೈಸಲು 50 ಲಕ್ಷ ರೂ. ಅಂದಾಜು ತಯಾರಿಸಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಎಲ್ಲಾ ನಗರಗಳು ಬೆಳೆಯುವ ರೀತಿಯಲ್ಲಿ ಶಿಕಾರಿಪುರ ನಗರ ಸಹ ಬೆಳೆಯುತ್ತಿದೆ. ಅನೇಕ ಹೊಸ ಬಡಾವಣೆಗಳು ಆಗಿವೆ. ಅಲ್ಲಿ ಕುಮದ್ವತಿ ನದಿ ಹರಿಯುತ್ತದೆ. ಆದರೆ ಎರಡು ಕೊಡಪಾನ ನೀರು ಸಹ ಶಿಕಾರಿಪುರದಲ್ಲಿ ಸಿಗುವುದಿಲ್ಲ. ತಾವು ಹೇಳಿದ್ದೀರಿ 50ಲಕ್ಷ ರೂಪಾಯಿಗಳ ಅಂದಾಜು ರೆಡಿ ಇದೆಯೆಂದು. ಇವತ್ತು ಪುರಸಭೆಯ ಹಣಕಾಸಿನ ಪರಿಸ್ಥಿತಿಯಲ್ಲಿ ಸಿಬ್ಬಂದಿಗೆ ಸಂಬಳ ಕೊಡುವ ಸ್ಥಿತಿಯಲ್ಲಿಲ್ಲ. ದಯವಿಟ್ಟು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಈ ವರ್ಷವೇ ಈ ಒಂದು ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಸನ್ಮಾನ್ಯ ಮಂತ್ರಿಗಳು ತೀರ್ಮಾನ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೇ, ಮೊದಲು 1985ರಲ್ಲಿ 30ಲಕ್ಷದ ಸ್ಕೀಮ್ ಪೂರ್ಣವಾಗಿದೆ. ಏನು ಇಂಟೀರಿಯರ್ ಟೌನ್ ಇದೆ, ಅಲ್ಲೆಲ್ಲಾ ನೀರು ಕೊಡುತ್ತಾ ಇದ್ದೇವೆ. ಆದರೆ, 3–4 ಬಡಾವಣೆಗಳೇನಿವೆ, ಅಲ್ಲಿ ನೀರಿಗೆ ತೊಂದರೆಯಾಗಿದೆ, ಇದು ನಮಗೂ ಗೊತ್ತಿದೆ. 50 ಲಕ್ಷ ರೂಪಾಯಿಗಳಲ್ಲಿ, 1–1ಲಕ್ಷ ಲೀಟರಿನ ಎರಡು ಓವರ್ ಹೆಡ್ ಟ್ಯಾಂಕುಗಳು, ಮತ್ತು ಡಿಸ್ಟ್ರಿಬ್ಯೂಷನ್ ಲೈನ್‌ಗೆ 50 ಲಕ್ಷ ಆಗುತ್ತವೆ. ಇದರ ಬಗ್ಗೆ ಮುನಿಸಿಪಾಲಿಟಿಯಿಂದ ಪ್ರಪೋಸಲ್ ಕಳುಹಿಸಬೇಕು. ಇದರಲ್ಲಿ ಏನಾಗಿದೆ ಅಂದರೆ, ನಮ್ಮ ಗೈಡ್‌ಲೈನ್ಸ್ ಪ್ರಕಾರ, ಟಿ.ಎಂ.ಸಿ. 20ಪರ್ಸೆಂಟ್, ಗವರ್ನಮೆಂಟ್ 30 ಪರ್ಸೆಂಟ್, ಎಲ್.ಐ.ಸಿ. ಮತ್ತು ಹುಡ್ಕೋದಿಂದ 50 ಪರ್ಸೆಂಟ್ ತೆಗೆದುಕೊಳ್ಳುತ್ತೇವೆ. ಟಿ.ಎಂ.ಸಿ.ಯವರು 10 ಲಕ್ಷ ಕೊಡುತ್ತಾರೆಯೇ ಅಥವಾ ಲೋನ್ ಬೇಕೇ ಎಂಬ ಬಗ್ಗೆ ಪ್ರಸ್ತಾವನೆ ಕಳುಹಿಸಿದರೆ, ಮುಂದಿನ ವರ್ಷದಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅಧ್ಯಕ್ಷರೇ, ಆಗಲೇ ಹೇಳಿದ ಹಾಗೆ, ಪುರಸಭೆಯವರ ಹತ್ತಿರ ಶಕ್ತಿ ಇಲ್ಲ, ಸರ್ಕಾರವೇ ಸಾಲದ ರೂಪದಲ್ಲಿ ಕೊಟ್ಟು, ಈ ವರ್ಷ ಆ ಕೆಲಸವನ್ನು ಪೂರ್ತಿ ಮಾಡಬೇಕು. ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಪುರಸಭೆ ಮತ್ತು ನಗರಸಭೆಗಳ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲದಿರುವ ಸಂದರ್ಭದಲ್ಲಿ ಕುಡಿಯುವ ನೀರಿಗೆ ಯಾವುದೇ ನಿಬಂಧನೆಯನ್ನು ಹಾಕದೇ,

ನಗರಸಭೆ ಮತ್ತು ಪುರಸಭೆಗಳಿಗೆ ನೀರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಖರ್ಚನ್ನು ಪೂರ್ತಿಯಾಗಿ ಭರಿಸುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ಚೌಡರೆಡ್ಡಿ:– 1992ರಲ್ಲಿ ಮೊದಲು ಟಿ.ಎಂ.ಸಿ.ವಂತಿಕೆ ಏನಿತ್ತೋ, ಅದು ಲೋನ್ ಎಂದು ಟ್ರೀಟ್ ಮಾಡುತ್ತಿದ್ದೆವು. 1992ರಿಂದ ವಂತಿಕೆ ಕೊಡಬೇಕೆಂದು ಆಜ್ಞೆಯಾಗಿದೆ. ಇದರ ಬಗ್ಗೆ ಈಗಾಗಲೇ ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತಿದ್ದೇನೆ. ನೀರು ಸರಬರಾಜು ಬಹಳ ಮುಖ್ಯವಾದುದು. ಯಾವ ಮುನಿಸಿಪಾಲಿಟಿಯವರು ವಂತಿಕೆ ಕೊಡುವುದಕ್ಕಾಗುವುದಿಲ್ಲ. ಅವರಿಗೆ ಇದನ್ನು ಲೋನ್ ಎಂದು ಪರಿಗಣಿಸಿ, ಆಮೇಲೆ ಆಕ್ಟ್ರಾಯ್ ಗ್ರಾಂಟ್‌ನಲ್ಲಿ ಇದನ್ನು ಮುರಿದುಕೊಳ್ಳಬೇಕೆಂದು ಹೇಳಿ ಮಾತನಾಡುತ್ತಿದ್ದೇನೆ. ಆದರೆ, ಅವರು ಲೋನ್‌ಗೆ ಒಂದು ನಿರ್ಣಯ ಮಾಡಿ ಕಳುಹಿಸಿಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ದಯಮಾಡಿ, ಈ ವರ್ಷವೇ ಕೆಲಸ ಪ್ರಾರಂಭವಾಗುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಚೌಡರೆಡ್ಡಿ:– ಮುಂದಿನ ವರ್ಷದಲ್ಲಿ ತೆಗೆದುಕೊಳ್ಳುತ್ತೇವೆ.

ಉಡುಪಿಯ ಶ್ರೀ ಲಕ್ಷ್ಮೀನಾರಾಯಣ ರಾವ್ ಸ್ಮಾರಕ ಭವನದ ನಿರ್ಮಾಣದಲ್ಲಿ ತಡೆ

358 (1732): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿಯ ಲಕ್ಷ್ಮೀನಾರಾಯಣರಾವ್ ಸ್ಮಾರಕ ಸ್ವರ್ಣ ಮಹೋತ್ಸವ ಪುರಭವನ ನಿರ್ಮಾಣದ ಕೆಲಸ ಅರ್ಧದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆದರೆ ಕೆಲಸ ಪ್ರಾರಂಭಿಸುವಾಗ ಅಂದಾಜು ವೆಚ್ಚ ಎಷ್ಟು ಹಾಗೂ ಯಾವ ಮೂಲಗಳಿಂದ ಎಷ್ಟು ಖರ್ಚಾಗಿದೆ;

ಇ) ಇದನ್ನು ಪೂರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮ ಏನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಹೌದು.

ಆ) ಕೆಲಸ ಪ್ರಾರಂಭಿಸುವಾಗ ಅಂದಾಜು ವೆಚ್ಚ 30 ಲಕ್ಷ. (ಅಂದಾಜು ಮೂಲವು 10 ಲಕ್ಷ ಸಾರ್ವಜನಿಕರಿಂದ, 10 ಲಕ್ಷ ಪುರಸಭೆಯಿಂದ ಹಾಗೂ 10 ಲಕ್ಷ ಸರ್ಕಾರದಿಂದ) ಈವರೆಗೆ ಪುರಸಭೆಯು ಒಟ್ಟು 29 ಲಕ್ಷ ರೂ.ಗಳನ್ನು ಖರ್ಚು ಮಾಡಿದೆ.

ಇ) ಪುರಭವನವನ್ನು ಪುರಸಭೆಯು ಕಟ್ಟಿಸುತ್ತಿರುವುದರಿಂದ ಅದನ್ನು ಪೂರ್ತಿಗೊಳಿಸುವ ಬಗ್ಗೆ ಸರ್ಕಾರವು ತೆಗೆದುಕೊಳ್ಳುವ ಕ್ರಮ ಉದ್ಭವವಾಗುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಸನ್ಮಾನ್ಯ ಅಧ್ಯಕ್ಷರೇ, ನನಗೆ ಉತ್ತರದಲ್ಲಿ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಉಡುಪಿಯ ಪ್ರಥಮ ನಗರಸಭಾಪತಿ ಹಾಗೂ ಉಡುಪಿಯ ನಿರ್ಮಾಪಕರು ಹಾಗೂ ಶ್ಲಾಘನೆಗೆ ಪಾತ್ರರಾದ ಅರೂರು ಲಕ್ಷ್ಮೀನಾರಾಯಣರಾವ್ ಸ್ಮಾರಕ ಸ್ವರ್ಣ ಮಹೋತ್ಸವದ ಪುರಭವನ, ಉಡುಪಿಯ ಅಜ್ಜರಕಾಡಿನಲ್ಲಿ, ನಿರ್ಮಾಣ ಪ್ರಾರಂಭವಾಗಿ, 2 ವರ್ಷದಿಂದ ಕೆಲಸ ನಿಂತಿದೆ. ಆರ್ಥಿಕ ತೊಂದರೆಯಿಂದ ಈ ಕೆಲಸ ನಿಂತಿದೆ. ಹಿಂದೆ, ಇದಕ್ಕೆ 600 ಕುಟುಂಬದಿಂದ 12 ಲಕ್ಷ ಕೊಟ್ಟಿದ್ದಾರೆ.